# ಸಂತೂರ್ ಸ್ಕಾಲರ್‌ಶಿಪ್ ವರ

## ಬಡ ಹೆಣ್ಮಕ್ಕಳ ಉನ್ನತ ಶಿಕ್ಷಣಕ್ಕೆ ವಿಪ್ರೋ ಕನ್ಸೂಮರ್ ಕೇರ್ ಆ್ಯಂಡ್ ವಿಪ್ರೋ ಕೇರ್ಸ್‌ನ ಸಂತೂರ್ ವಿದ್ಯಾರ್ಥಿವೇತನ ನೆರವು

■ ವಿಜಯವಾಣಿ ಸುದ್ದಿಜಾಲ ಕಲಬುರಗಿ

ಹೆಣ್ಣೊಂದು ಕಲಿತರೆ ಇಡೀ ದೇಶವೇ ಕಲಿತಂತಾಗುತ್ತದೆ ಎಂಬ ಮಾತಿಗೆ ಪೂರಕವಾಗಿ ಬಡ ವಿದ್ಯಾರ್ಥಿನಿಯರ ಉನ್ನತ ಶಿಕ್ಷಣಕ್ಕೆ ಸಹಾಯಹಸ್ತ ಚಾಚುತ್ತಿದೆ ವಿಪ್ರೋ ಕನ್ಸೂಮರ್ ಕೇರ್ ಆ್ಯಂಡ್ ವಿಪ್ರೋ ಕೇರ್ಸ್‌ನ ಸಂತೂರ್ ವಿದ್ಯಾರ್ಥಿವೇತನ.

ಹೌದು, ಆರು ಜನರಿರುವ ಕುಟುಂಬದ ಕಷ್ಟ-ನಷ್ಟಗಳ ಮಧ್ಯೆ ದ್ವಿತೀಯ ಪಿಯುಸಿವರೆಗೆ ಓದಿದ ಯಾದಗಿರಿ ಜಿಲ್ಲೆ ಸುರಪುರದ ಬಡ ಪ್ರತಿಭೆ ಏಕ್ತಾಗೆ ಉನ್ನತ ಶಿಕ್ಷಣ ಕನಸಿನ ಮಾತಾಗಿತ್ತು. ಓದುವ ಹಂಬಲ, ಸಾಧಿಸುವ ಛಲವಿದ್ದರೂ ಪ್ರವೇಶ ಶುಲ್ಕ, ಓದುವ ಖರ್ಚು ಭರಿಸುವುದು ಕಷ್ಟಸಾಧ್ಯವಾಗಿತ್ತು.

ಇಂಥ ಸ್ಥಿತಿಯಲ್ಲಿ ಫೋಟೊಕಾಪಿ ಕೇಂದ್ರವೊಂದರಲ್ಲಿ ಕೆಲಸ ಮಾಡುತ್ತಿದ್ದ ಪರಿಚಯಸ್ಥೆಯೊಬ್ಬಳು ಸಂತೂರ್ ವಿದ್ಯಾರ್ಥಿವೇತನ (ಸ್ಕಾಲರ್‌ಶಿಪ್) ಬಗ್ಗೆ ತಿಳಿಹೇಳಿದಳು. ಇದರಿಂದ ಭರವಸೆಯ ಆಶಾಕಿರಣದೊಂದಿಗೆ ಏಕ್ತಾ ಸ್ಕಾಲರ್ ಶಿಪ್‌ಗೆ ಅರ್ಜಿ ಹಾಕಿದ್ದಲ್ಲದೆ ಆಯ್ಕೆಯೂ ಆದಳು. ಆಗ ಆಕೆ ಸಂತೋಷಕ್ಕೆ ಪಾರವೇ ಇರಲಿಲ್ಲ.

2016-17ರಲ್ಲಿ ಆರಂಭವಾದ ಈ ಸಂತೂರ್ ವಿದ್ಯಾರ್ಥಿವೇತನ ಬಡ ಪ್ರತಿಭಾವಂತ ಹೆಣ್ಮಕ್ಕಳ ಪಾಲಿಗೆ ವರವಾಗಿ ಹೊರಹೊಮ್ಮಿದೆ. ಕರ್ನಾಟಕ, ಆಂಧ್ರ ಪ್ರದೇಶ ಮತ್ತು ತೆಲಂಗಾಣದಲ್ಲಿ ಸುಮಾರು 900 ವಿದ್ಯಾರ್ಥಿವೇತನ ಪ್ರತಿವರ್ಷ ಒದಗಿಸುತ್ತಿದೆ. ವರ್ಷಕ್ಕೆ 24 ಸಾವಿರ ಸ್ಕಾಲರ್ ಶಿಪ್ ನೀಡುತ್ತಿದ್ದು, ಇದರಲ್ಲಿ ಟ್ಯೂಶನ್ ಫೀ ಜತೆಗೆ ಶಿಕ್ಷಣದಲ್ಲಿ ಎದುರಾಗುವ ಖರ್ಚಿಗೆ ಬಳಸಿಕೊಳ್ಳಬಹುದಾಗಿದೆ. ಸದ್ಯ ಎರಡನೇ ವರ್ಷದ ಕಾರ್ಯಕ್ರಮದಲ್ಲಿ ಸ್ಕಾಲರ್‌ಶಿಪ್ ಪಡೆಯುವವರ ಸಂಖ್ಯೆ 1800ಕ್ಕೆ ಏರಿರುವುದು ಗಮನಾರ್ಹ.

> ದುರ್ಬಲ ಆರ್ಥಿಕ ಸ್ಥಿತಿಯೇ ಬಹುತೇಕ ವಿದ್ಯಾರ್ಥಿಗಳ ಓದಿಗೆ ಅಡ್ಡಿಯಾಗಿದೆ. ಇದನ್ನು ಮನಗಂಡ ಸಂಸ್ಥೆ ವಿಶೇಷವಾಗಿ ಹೆಣ್ಮಕ್ಕಳಿಗಾಗಿಯೇ ಸಂತೂರ್ ಸ್ಕಾಲರ್‌ಶಿಪ್ ಕೊಡಮಾಡುತ್ತಿದೆ. ಒಬ್ಬ ಹೆಣ್ಣುಮಗಳಿಗೆ ಶಿಕ್ಷಣ ಒದಗಿಸಿದರೆ ದೇಶವನ್ನೇ ಬಲಪಡಿಸಿದಂತಾಗುತ್ತದೆ ಎಂಬ ಮಾತಿಗೆ ಬದ್ಧವಾಗಿ ಉನ್ನತ ಶಿಕ್ಷಣಕ್ಕೆ ಅವಕಾಶ ಮಾಡಿಕೊಡಲಾಗುತ್ತಿದೆ.
>
> | ಅನಿಲ್ ಚುಗ್ ಸಿಇಒ, ವಿಪ್ರೋ ಕನ್ಸೂಮರ್ ಕೇರ್ ಲೈಟಿಂಗ್, ಕನ್ಸೂಮರ್ ಕೇರ್ ಬಿಜಿನೆಸ್ ಇಂಡಿಯಾ

> ಆರ್ಥಿಕವಾಗಿ ಅಶಕ್ತವಾಗಿರುವ ಎಲ್ಲ ಪ್ರತಿಭಾವಂತ ವಿದ್ಯಾರ್ಥಿನಿಯರಿಗೂ ಈ ವಿದ್ಯಾರ್ಥಿವೇತನ ತುಂಬ ಸಹಾಯಕವಾಗಿದೆ. ಹೆಚ್ಚಿನ ಓದಿಗೂ ಪ್ರೇರಣೆ ನೀಡಿದೆ.
>
> | ಏಕ್ತಾ ಸಂತೂರ್ ಸ್ಕಾಲರ್‌ಶಿಪ್ ಪಡೆದ ಸುರಪುರ ಪ್ರತಿಭೆ